ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**

**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

---

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/51/2012-13/1278 ದಿನಾಂಕ : 05.09.2013

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು

ಮಾನ್ಯರೇ,

***ವಿಷಯ:*** 2012-13ನೇ ಸಾಲಿನ ಲೆಕ್ಕಪರಿಶೋಧನೆ ವರದಿ, ಹಣಬಳಕೆ ಪ್ರಮಾಣ ಪತ್ರ ಮತ್ತು 2013-14ನೇ ಸಾಲಿಗೆ ಏಪ್ರಿಲ್-2013 ರಿಂದ ಆಗಸ್ಟ್-2013 ರವರೆಗಿನ ತಾತ್ಕಾಲಿಕ ಹಣ ಬಳಕೆ ಪತ್ರ ಸಲ್ಲಿಸುವುದು ಹಾಗೂ ಅನುದಾನ ಜಿಲ್ಲೆಗೆ ಬಿಡುಗಡೆ ಮಾಡಲಾಗಿದ್ದು ಜಮಾ ಆಗದಿರುವ ಕುರಿತು ಪರಿಶೀಲನೆ.

***ಉಲ್ಲೇಖ:*** 1.ಕೇಂದ್ರ ಸರ್ಕಾರದ ಅ.ಸ.ಪತ್ರ ಸಂಖ್ಯೆW-11023/01/2013-NBA dtd.26.08.2013
2.ಕಾರ್ಯದರ್ಶಿಗಳು,ಗ್ರಾ.ಅ & ಪಂ.ರಾಜ್ ಇಲಾಖೆ ಇವರು ಕೇಳಿರುವ ವಿವರಣೆಯಂತೆ.
3.ದಿನಾಂಕ: 29.08.2013 ರಂದು ನಡೆದ ಮುಖ್ಯ ಲೆಕ್ಕಾಧಿಕಾರಿಗಳ ಸಭೆಯಂತೆ.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದಡಿ ಉಲ್ಲೇಖ(1) ರಂತೆ ಕೇಂದ್ರ ಸರ್ಕಾರವು 2013-14ನೇ ಸಾಲಿನ 1ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು 2012-13ನೇ ಸಾಲಿನ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರ ಮತ್ತು ಲೆಕ್ಕ ಪರಿಶೋಧನೆ ವರದಿಯನ್ನು ಹಾಗೂ 2013-14ನೇ ಸಾಲಿಗೆ ಏಪ್ರಿಲ್-2013 ರಿಂದ ಆಗಸ್ಟ್- 2013 ರವರೆಗಿನ ಕೇಂದ್ರ & ರಾಜ್ಯದ ಪಾಲಿನ ಅನುದಾನಕ್ಕೆ ತಾತ್ಕಾಲಿಕ ಹಣ ಬಳಕೆ ಪ್ರಮಾಣ ಪತ್ರವನ್ನು ತುರ್ತಾಗಿ ಸಲ್ಲಿಸಿದೇ ಇದ್ದಲ್ಲಿ ಪ್ರಸಕ್ತ ಸಾಲಿಗೆ ಬಿಡುಗಡೆ ಮಾಡಬಹುದಾದ 1ನೇ ಕಂತಿನ ಅನುದಾನವನ್ನು ತಡೆಹಿಡಿಯಲಾಗುವುದೆಂದು ಸೂಚಿಸಲಾಗಿರುತ್ತದೆ. ಇದರಿಂದ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಸಾದ್ಯವಾಗುವುದಿಲ್ಲ.

2003-04ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಅನುದಾನ ಜಿಲ್ಲೆಗೆ ಬಿಡುಗಡೆ ಮಾಡಲಾಗಿದ್ದು, ಉಲ್ಲೇಖ(3) ರನ್ವಯ ದಿನಾಂಕ: 29.08.2013 ರಂದು ನಡೆದ ಮುಖ್ಯ ಲೆಕ್ಕಾಧಿಕಾರಿಗಳ ಸಭೆಯಲ್ಲಿ ಕಾರ್ಯಕ್ರಮದಡಿ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಕೇಂದ್ರ/ರಾಜ್ಯದ ಪಾಲಿನ ಅನುದಾನವು ಜಮಾ ಆಗಿರುವುದಿಲ್ಲವೆಂದು ಕೆಲವು ಜಿಲ್ಲೆಗಳ ಮುಖ್ಯ ಲೆಕ್ಕಾಧಿಕಾರಿಗಳು ಸಭೆಯಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಕೇಂದ್ರ ಕಚೇರಿಯಲ್ಲಿ ಪರಿಶೀಲಿಸಲು ಈ ಪತ್ರದೊಂದಿಗೆ ಲಗತ್ತಿಸಿರುವ **ಅನುಬಂಧ-1 ರ ದಿನಾಂಕಗಳಂದು** ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ಹಾಜರಾಗಬೇಕಾಗಿರುತ್ತದೆ.

- 2012-13ನೇ ಸಾಲಿನ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನಕ್ಕೆ ಈಗಾಗಲೇ ಹಣಬಳಕೆ ಪ್ರಮಾಣ ಪತ್ರ ಮತ್ತು ಲೆಕ್ಕ ಪರಿಶೋಧನೆ ವರದಿಯನ್ನು ನಿಗಧಿತ ನಮೂನೆಯಲ್ಲಿ ತಯಾರಿಸಿದ್ದಲ್ಲಿ ಮುದ್ದಾಂ ಕಚೇರಿಗೆ ಸಲ್ಲಿಸುವುದು.
- 2013-14ನೇ ಸಾಲಿಗೆ ಏಪ್ರಿಲ್-2013 ರಿಂದ ಆಗಸ್ಟ್- 2013 ರವರೆಗಿನ ಕೇಂದ್ರ & ರಾಜ್ಯದ ಪಾಲಿನ ಅನುದಾನಕ್ಕೆ ತಾತ್ಕಾಲಿಕ ಹಣ ಬಳಕೆ ಪ್ರಮಾಣ ಪತ್ರ ಖುದ್ದಾಗಿ ತರತಕ್ಕದ್ದು.
- 2003-04 ರಿಂದ 2012-13 ರವರೆಗೆ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಕೇಂದ್ರ/ರಾಜ್ಯದ ಪಾಲಿನ ವಿವರ.
- 2003-04 ರಿಂದ 2012-13 ರವರೆಗೆ ರಾಜ್ಯದ ಪಾಲಿನ ಅನುದಾನ ಜಮಾ ಆಗಿರುವುದಕ್ಕೆ ಕೆಲವು ಜಿಲ್ಲೆಗಳು ಈವರೆಗೆ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯನ್ನು ಸಲ್ಲಿಸಿರುವುದಿಲ್ಲ. ಈ ಕುರಿತು ಉಲ್ಲೇಖ(2) ರಂತೆ ಕಾರ್ಯದರ್ಶಿಗಳ ಗಮನಕ್ಕೆ ತರಲಾಗಿದ್ದು, ಹಾಜರಾಗುವಾಗ ಖುದ್ದಾಗಿ ತರತಕ್ಕದ್ದು.

ಪು.ತಿ.ನೋ

- 2009-10 ರಿಂದ 2012-13 ರವರೆಗಿನ ಅಂತಿಮ ಶಿಲ್ಕು ನಿಗಧಿತ ನಮೂನೆಯಲ್ಲಿ ತರತಕ್ಕದ್ದು.

ಮೇಲಿನಂತೆ ಇತರೆ ಎಲ್ಲಾ ಮಾಹಿತಿಗಳೊಂದಿಗೆ ಸಂಬಂಧಪಟ್ಟ ಲೆಕ್ಕಾಧಿಕ್ಷಕರು/ ಯೋಜನಾ ವ್ಯವಹಾರವನ್ನು ನಿರ್ವಹಿಸುವ ವಿಷಯ ನಿರ್ವಾಹಕರುಗಳನ್ನು ನಿಯೋಜಿಸಲು ಕೋರಲಾಗಿದ್ದು, ಹಾಜರಾಗದೇ ಇದ್ದಲ್ಲಿ ಪ್ರಧಾನ ಕಾರ್ಯದರ್ಶಿಗಳ ಗಮನಕ್ಕೆ ತರಲಾಗುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರ ಪರವಾಗಿ
ರಾ.ನೀ.ನೈ.ಸಂಸ್ಥೆ ಹಾಗೂ ಸರ್ಕಾರದ
ಪದನಿಮಿತ್ತ ಅಪರ ಕಾರ್ಯದರ್ಶಿಗಳು
ಗ್ರಾ.ಅ. ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು :1.ಪ್ರಧಾನ ಕಾರ್ಯದರ್ಶಿಗಳು ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.&ಪಂ.ರಾಜ್ ಇಲಾಖೆ ಇವರಿಗೆ ಮಾಹಿತಿಗಾಗಿ.
2.ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.&ಪಂ.ರಾಜ್ ಇಲಾಖೆ ಇವರಿಗೆ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009. ದೂರವಾಣಿ/ಫ್ಯಾಕ್ಸ್ ಸಂ.- 22221862
E-mail : wsrdpr@gmail.com

Annexure-1

| Nirmal Bharat Abhiyan | | | |
|---|---|---|---|
| District Grants Releases reconcialation, Audit Report, UC 2012-13 Verification Calender | | | |
| **Sl.No.** | **Name of District** | **District Grants Releases, UC, Audit Report 2012-13 & other accounts related Verification Date** | **Time** |
| 1 | BAGALKOT | 11.09.2013 | 10.30 AM |
| 2 | BANGALORE RURAL | 10.09.2013 | 12.30 AM |
| 3 | BANGALORE URBAN | 10.09.2013 | 2.30 PM |
| 4 | BELGAUM | 11.09.2013 | 4.30 PM |
| 5 | BELLARY | 11.09.2013 | 12.30 AM |
| 6 | BIDAR | 11.09.2013 | 2.30 PM |
| 7 | BIJAPUR | 12.09.2013 | 10.30 AM |
| 8 | CHAMARAJANAGAR | 12.09.2013 | 12.30 AM |
| 9 | CHICKMAGALUR | 12.09.2013 | 2.30 PM |
| 10 | CHIKBALLAPUR | 12.09.2013 | 4.30 PM |
| 11 | CHITRADURGA | 13.09.2013 | 10.30 AM |
| 12 | DAVANGERE | 13.09.2013 | 12.30 AM |
| 13 | DHARWAD | 13.09.2013 | 2.30 PM |
| 14 | GADAG | 13.09.2013 | 4.00 PM |
| 15 | GULBARGA | 14.09.2013 | 10.30 AM |
| 16 | YADAGIR | 14.09.2013 | 12.30 AM |
| 17 | HASSAN | 14.09.2013 | 2.30 PM |
| 18 | HAVERI | 14.09.2013 | 4.30 PM |
| 19 | KODAGU | 16.09.2013 | 10.30 AM |
| 20 | KOLAR | 16.09.2013 | 12.30 AM |
| 21 | KOPPAL | 16.09.2013 | 2.30 PM |
| 22 | MANDYA | 16.09.2013 | 4.00 PM |
| 23 | MANGALORE(DK) | 16.09.2013 | 5.00 PM |
| 24 | MYSORE | 17.09.2013 | 10.30 AM |
| 25 | RAICHUR | 17.09.2013 | 12.30 AM |
| 26 | RAMANAGARA | 10.09.2013 | 4.30 PM |
| 27 | SHIMOGA | 17.09.2013 | 2.30 PM |
| 28 | TUMKUR | 10.09.2013 | 10.30 AM |
| 29 | UDUPI | 17.09.2013 | 4.30 PM |
| 30 | UTTAR KANNADA | 13.09.2013 | 5.00 PM |

for **Mission Director, SWSM**
& E/o Additional Secretary to Govt.
Rural Development & Panchayat Raj Dept.